ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

ಸಿ.ಸಿ ನಂ. **2187/2014**

ಚಾಸಾಃ 16
ಫ್ರಾಸಾಃ 15

ದಿನಾಂಕಃ **07-11-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಎಂ. ಪಿ. ಶಿವನಂಜೇಗೌಡ |
| ತಂದೆಯ/ಗಂಡನ ಹೆಸರು | ಪುಟ್ಟೇಗೌಡ |
| ವಯಸ್ಸು | 52 ವರ್ಷ |
| ಉದ್ಯೋಗ | ಪಿ.ಡಿ. ಓ ಹೊನ್ನವಳ್ಳಿ |
| ವಾಸ ಸ್ಥಳ | ಬಿದರೆಕೆರೆ, ತಿಪಟೂರು ತಾ. |

ಮುಖ್ಯ ವಿಚಾರಣೆ ಎಪಿಪಿಯವರಿಂದಃ

ನಾನು ನೊಣವಿನ ಕೆರೆ ಗ್ರಾಮ ಪಂಚಾಯಿತಿಯಲ್ಲಿ **2013** ರಿಂದ ಮಾರ್ಚ **2021** ವರೆಗೆ ಪಿ ಡಿ ಓ ಅಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ **29-09-2016** ರಂದು **1** ನೇ ಆರೋಪಿಯು ಖಾತಾ ನಂ. **552** ರ ಎಕ್ಸಾಕ್ಟನ್ನು ಅವರ ತಂದೆಯ ಹೆಸರಿನಲ್ಲಿ ಇದ್ದಿದ್ದ ಪ್ರತಿಯನ್ನು ಕೇಳಿರುತ್ತಾರೆ. ನಾವು ಅದಕ್ಕೆ ಸಂಬಂದಪಟ್ಟ ಖಾತಾ ಎಕ್ಸಾಕ್ಟ ನಕಲುಗಳನ್ನು ಅದೇ ದಿನದಂದು ನೀಡಿರುತ್ತೇವೆ. ಈ ಹಂತದಲ್ಲಿ ಸಾಕ್ಷಿಯು ಒಂದು ದಾಖಲೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಖಾತಾ ಎಕ್ಸಾಕ್ಟ್ ಆಗಿದ್ದು ಅದನ್ನು ನಿಪಿ-**9** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-**9(**ಎ**)** ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಸಿ ವಿ. ವಕೀಲರಿಂದಃ

ನೊಣವಿನಕೆರೇ ಪೋಲಿಸರು ನನಗೆ ಲಿಖಿತ ಬರವಣಿಗೆಯ ಮೂಲಕ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಯನ್ನು ನಾನು ಪೋಲಿಸರಿಗೆ ದಾಖಲಾತಿ ಜೊತೆ ನೀಡಿರುವುದಿಲ್ಲ,

ಅದು ನಮ್ಮ ಕಚೇರಿಯಲ್ಲಿದೆ. ಸದರಿ ನಿಪಿ.9 ನ್ನು ನೀಡಿದಂತ ಸಮಯದಲ್ಲಿ ಯಾವುದೇ ಕವರಿಂಗ್ ಲೆಟರ್ ನ್ನು ಹಾಕಿ ಕೊಟ್ಟಿರುವುದಿಲ್ಲ. ನಿಪಿ.9 ರ ಮೇಲಿನ ಯಾವ ದಿನದಂದು ದಾಖಲಾತಿಯನ್ನು ನೀಡಿರುತ್ತೇನೆ ಎಂಬುದರ ದಿನಾಂಕವನ್ನು ಬರೆದಿರುವುದಿಲ್ಲ ಎಂದರೆ ಸರಿ . ನಿಪಿ.9 ರ ಮೇಲೆ ಇರುವ ನಮ್ಮ ಕಚೇರಿಯ ಸೀಲಿನಲ್ಲಿ ಕ್ರಮ ಸಂಖ್ಯೆ ಹಾಗೂ ದಿನಾಂಕವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ . ಅದೇ ರೀತಿ ದಾಖಲಾತಿಗೆ ಸಂಬಂದಪಟ್ಟಿರುವ 1 ನೇ ಆರೋಪಿಯ ತಂದೆಯ ಹೆಸರಿನಲ್ಲಿರುವ ಖಾತಾ ಅಸ್ತಿಯ ವಿಸ್ತೀರ್ಣ ಎಷ್ಟು ಎಂಬುದನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ.9 ರಲ್ಲಿ ವಾಸದ ಮನೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ . ಪೋಲಿಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.